**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

**ಸಿಸಿ ಸಂಖ್ಯೆ:** 388/2019 **CW**-4 **PW**-2

ಸಾಕ್ಷಿಯನ್ನು ದಿಃ 24.08.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಹೆಸರುಃ ರವಿಕುಮಾರ್**

**ತಂದೆ ಹೆಸರುಃ ವೆಂಕಟಸ್ವಾಮಿ**

**ವಯಸ್ಸುಃ 29**

**ವೃತ್ತಿಃ** ಡ್ರೈವರ್

**ವಾಸ ಸ್ಥಳಃ** ಯಳಬುರ್ಗಿ

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಬೊಲೋರೋ ವಾಹನ ಸಂಖ್ಯೆ ಕೆಎ-03-ಎಂಜಿ -8114 ರ ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. 2018 ರ ವಿಧಾನ ಸಭಾ ಚುನಾವಣೆಗೆ ನಮ್ಮ ವಾಹನವನ್ನು ಬಾಡಿಗೆಗೆ ಪಡೆದಿದ್ದರು. ನಾನು ಅಧಿಕಾರಿಗಳನ್ನು ಸದರಿ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದೆನು. 2018 ರಲ್ಲಿ ಸಂಜೆ 5.00 ಗಂಟೆ ನಂತರ ಕೋಲಾರ-ಬಂಗಾರಪೇಟೆ ಮುಖ್ಯ ರಸ್ತೆಯ ಬೀರಾಂಡಹಳ್ಳಿ ಸಮೀಪ ಒಂದು ಟೆಂಪೋ ಬಿದ್ದು ಹೋಗಿರುವುದಾಗಿ ತಿಳಿದು ಅಧಿಕಾರಿಗಳು ನನ್ನನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋದರು. ಸದರಿ ಸ್ಥಳದಲ್ಲಿ ಒಂದು ಟೆಂಪೊ ಬಿದ್ದು ಹೋಗಿದ್ದು ಅದರಲ್ಲಿ ಅಕ್ಕಿ ಮೂಟೆಗಳು ಇರುವುದಾಗಿ ತಿಳಿಯಿತು. ನಾನು ಅಕ್ಕಿ ಮೂಟೆಗಳನ್ನು ನೋಡಿಲ್ಲ. ಸದರಿ ಸ್ಥಳದಲ್ಲಿ ಅಧಿಕಾರಿಗಳು ಏನು ಮಾಡಿದರು ಎಂದು ನಾನು ನೋಡಿಲ್ಲ. ಸದರಿ ಟೆಂಪೋ ಯಾರಿಗೆ ಸೇರಿತ್ತು ಎಂದು ಮತ್ತು ಅದರಲ್ಲಿ ಎಷ್ಟು ಮೂಟೆ ಅಕ್ಕಿ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಅಧಿಕಾರಿಗಳನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಬೇರೆ ವಿಚಾರ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎಪಿಪಿರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ಅವರ ಹೇಳಿಕೆ ಭಾಗವಾದ "ಸಂಜೆ 6.10 ಗಂಟೆ ಸಮಯಕ್ಕೆ ಸ್ಥಳಕ್ಕೆ ಹೋಗಿ ನೋಡಿದಾಗ ........ ಗುರ್ತಿಸುತ್ತೇನೆ" ಎಂಬ ಸಂಪೂರ್ಣ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ಅದನ್ನು ಸಂಪೂರ್ಣವಾಗಿ ನಿರಾಕರಿಸಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಪಿ–1 ಎಂದು ಎಂದು ಗುರ್ತಿಸಲಾಯಿತು. ನಿಪಿ–1 ರಂತೆ ನಾನು ಹೇಳಿಕೆ ಕೊಟ್ಟಿದ್ದರು ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎ.ಎಂ.ಆರ್ ವಕೀಲರಿಂದಃ**

**ನಾನು ಆ ದಿನ ಬೀರಂಡಹಳ್ಳಿ ಗೇಟ್ ಬಳಿ ಹೋಗಿಲ್ಲ ಮತ್ತು ಅಲ್ಲಿ ಯಾವುದೇ ಟೆಂಪೋ ಬಿದ್ದಿರಲಿಲ್ಲ ಎಂದರೆ ಸರಿಯಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಬಂಗಾರಪೇಟೆ